ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಗೌರಿಬಿದನೂರು

ದಿನಾಂಕ 2ನೇ ಜೂನ್ ಮಾಹೆ 2026

:: ಉಪಸ್ಥಿತರು ::

ಶ್ರೀಮತಿ ಪುಷ್ಪ ಡಿ.,
ಬಿ.ಕಾಂ. ಎಲ್.ಎಲ್.ಬಿ.,

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಗೌರಿಬಿದನೂರು

ಸಿ.ಸಿ ಸಂಖ್ಯೆಃ 74/2021

ಪಿರ್ಯಾದುದಾರರು : ಸರ್ಕಾರದ ಪರವಾಗಿ,
ಗೌರಿಬಿದನೂರು ಗ್ರಾಮಾಂತರ ಪೊಲೀಸ್ ಠಾಣೆ

(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತರು :

1. ಗಂಗಾಧರಪ್ಪ ಬಿನ್ ಲೇಟ್ ಗಂಗಪ್ಪ
ವಯಸ್ಸು ಸುಮಾರು 53 ವರ್ಷಗಳು,

2. ರೆಡ್ಡಪ್ಪ ಬಿನ್ ಗಂಗಾಧರಪ್ಪ
ವಯಸ್ಸು ಸುಮಾರು 19 ವರ್ಷಗಳು,

3. ಸರೋಜಮ್ಮ ಕೋಂ ಗಂಗಾಧರಪ್ಪ
ಸುಮಾರು 48 ವರ್ಷಗಳು,

ಎಲ್ಲ ಆರೋಪಿಗಳ ವಾಸಃ ಬಾದಿಮರಳೂರು ಗ್ರಾಮ,
ಗೌರಿಬಿದನೂರು ತಾಲ್ಲೂಕು,
ಚಿಕ್ಕಬಳ್ಳಾಪುರ ಜಿಲ್ಲೆ.

(ಪ್ರತಿನಿಧಿಸುವವರು ಶ್ರೀ ಬಿ.ಎಲ್., ವಕೀಲರು)

KACB400001702021 ಸಿ.ಸಿ. ಸಂಖ್ಯೆ 74/2021

| | | |
|---|---|---|
| ಅಪರಾಧ ನಡೆದ ದಿನಾಂಕ | : | 19.05.2026 |
| ಅಪರಾಧ ವರದಿಯಾದ ದಿನಾಂಕ | : | 12.12.2020 |
| ಫಿರ್ಯಾದುದಾರರ ಹೆಸರು | : | ಹನುಮಂತಪ್ಪ |
| ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | : | 11.05.2026 |
| ತೀರ್ಪಿನ ದಿನಾಂಕ | : | 02.06.2026 |
| ಆರೋಪಿಸಲಾದ ದಂಡನೀಯ ಅಪರಾಧ | : | ಭಾರತ ದಂಡ ಸಂಹಿತೆ ಕಲಂ 323, 324 ಮತ್ತು 504 ಸಹ ಕಲಂ 34. |
| ನ್ಯಾಯಾಧೀಶರ ಅಭಿಪ್ರಾಯ | : | ಭಾರತ ದಂಡ ಸಂಹಿತೆ ಕಲಂ 323, 324 ಮತ್ತು 504 ಸಹ ಕಲಂ 34 ರೀತ್ಯಾ ದಂಡನೀಯ ಅಪರಾಧಗಳ ಆರೋಪಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ನಿರ್ದೋಷಿಗಳೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ. |
| ಸರ್ಕಾರದ ಪರವಾಗಿ | : | ಸಹಾಯಕ ಸರ್ಕಾರಿ ಅಭಿಯೋಜಕರು, ಗೌರಿಬಿದನೂರು |
| ಆರೋಪಿತರ ಪರವಾಗಿ | : | ಶ್ರೀ ಬಿ.ಎಲ್., ವಕೀಲರು |
| ತೀರ್ಪು ನೀಡಲು ತೆಗೆದುಕೊಂಡ ಒಟ್ಟು ಕಾಲಾವಧಿ | : | ವರ್ಷಗಳು 05 ತಿಂಗಳು 05 ದಿನಗಳು 21 |

ಸಹಿ/-
(ಪುಷ್ಪ ಡಿ.)
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಗೌರಿಬಿದನೂರು

:: ತೀರ್ಪು ::

ಗೌರಿಬಿದನೂರು ಗ್ರಾಮಾಂತರ ಪೊಲೀಸ ಠಾಣೆಯ ಆರಕ್ಷಕ ಉಪನೀರಿಕ್ಷಕರು ಆರೋಪಿತರ ವಿರುದ್ಧ ಭಾರತ ದಂಡ ಸಂಹಿತೆ ಕಲಂ 323, 324 ಮತ್ತು 504 ಸಹ ಕಲಂ 34 ರಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಾರಾಂಶ ಈ ಕೆಳಗಿನಂತೆ ಇದೆ :**

ದಿನಾಂಕ 19.05.2020 ರಂದು ರಾತ್ರಿ ಸುಮಾರು 8.30 ಗಂಟೆ ಸಮಯದಲ್ಲಿ ಗೌರಿಬಿದನೂರ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಗೌರಿಬಿದನೂರು ತಾಲ್ಲೂಕು, ಬಾದಿಮರಳೂರು ಗ್ರಾಮದ ಜಾಲಪ್ಪರವರ ಜಮೀನಿನ ಬಳಿ ಚಾಸಾ.1 ರವರು ಅವರ ಜಮೀನಿನಲ್ಲಿ ಟ್ರ್ಯಾಕ್ಟರ್ ನಿಂದ ಉಳುಮೆ ಮಾಡಿಸುತ್ತಿದ್ದಾಗ ಟ್ರ್ಯಾಕ್ಟರ್ ಸ್ವಲ್ಪ 1ನೇ ಆರೋಪಿಯ ಜಮೀನಿನಲ್ಲಿ ಹೋಗಿದ್ದರಿಂದ 1ನೇ ಆರೋಪಿಯು ಚಾಸಾ.1 ರವರಿಗೆ ನಮ್ಮ ಜಮೀನಿನ ಮುಸುಕಿನ ಜೋಳದ ಬೆಳೆಯನ್ನು ನಾಶಪಡಿಸಿದ್ದೀಯಾ ಎಂದು ಏಕಾಏಕಿ ಜಗಳ ಮಾಡಿ ಬೋಳಿ ಮಗನೇ ಎಂದು ಚಾಸಾ.1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು, ನಂತರ 1 ರಿಂದ 3ನೇ ಆರೋಪಿಗಳು ಚಾಸಾ.1 ರವರಿಗೆ ಜಗಳ ಮಾಡಿದ್ದು, ಆ ಪೈಕಿ 1ನೇ ಆರೋಪಿಯು ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, 2ನೇ ಆರೋಪಿಯು ಕೈಗಳಿಂದ ಚಾಸಾ.1 ರವರ ಮೈ ಕೈಗೆ ಹೊಡೆದು ಎದೆಗೆ ಕಚ್ಚಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, 3ನೇ ಆರೋಪಿಯು ಅಲ್ಲಿಯೇ ಇದ್ದ ಚಾಸಾ.2 ರವರಿಗೆ ಕೈಗಳಿಂದ ಹೊಡೆದು ಜುಟ್ಟನ್ನು ಹಿಡಿದು ಎಳೆದಾಡುತ್ತಿದ್ದಾಗ, ಜಗಳ ಬಿಡಿಸಲು ಅಡ್ಡ ಹೋದ ಚಾಸಾ.3 ರವರಿಗೆ 1 ರಿಂದ 3ನೇ ಆರೋಪಿಗಳು ಕೈಗಳಿಂದ ಮೈ ಮೇಲೆ

ಹೊಡೆದು ಕೆಳಕ್ಕೆ ತಳ್ಳಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತಾರೆಂದು ಚಾಸಾ.1 ರವರು ಆರೋಪಿತರ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ.

3. ಚಾಸಾ-1 ರವರು ನೀಡಿದ ದೂರಿನ ಮೇರೆಗೆ ಗೌರಿಬಿದನೂರು ಗ್ರಾಮಾಂತರ ಪೊಲೀಸರು ಭಾರತೀಯ ದಂಡ ಸಂಹಿತೆ ಕಲಂ. 323, 324 ಮತ್ತು 504 ಸಹ ಕಲಂ 34 ರಡಿಯಲ್ಲಿ ಮೊಕದ್ದಮೆ ಸಂಖ್ಯೆ 74/2021ನ್ನು ಆರೋಪಿತರ ವಿರುದ್ಧ ದಾಖಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ನಂತರ ಆರೋಪಿತರ ವಿರುದ್ಧ ಸದರಿ ಕಲಂಗಳ ಮೇಲೆ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರಿಗೆ ಸಮನ್ಸ್ ಕಳುಹಿಸಲಾಗಿ ಆರೋಪಿತರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಂತೆ ದೋಷಾರೋಪಣಾ ಪಟ್ಟಿ ಹಾಗೂ ಇತರ ಅಭಿಯೋಜನೆಗೆ ಸಂಬಂಧಿಸಿದ ದಾಖಲೆಗಳನ್ನು ಆರೋಪಿತರಿಗೆ ನೀಡಲಾಗಿರುತ್ತದೆ.

4. ನ್ಯಾಯಾಲಯವು ಆರೋಪಿತರ ವಿರುದ್ಧ ದೋಷಾರೋಪಣಾ ಸಾರಾಂಶವನ್ನು ರಚಿಸಿ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 240(2) ರಡಿಯಲ್ಲಿ ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಲಾಗಿದ್ದು, ಆರೋಪಿತರು ಸದರಿ ಆರೋಪವನ್ನು ನಿರಾಕರಿಸಿದ್ದು, ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

5. ಅಭಿಯೋಜನೆಯು ಮೂವರು ಸಾಕ್ಷಿದಾರರನ್ನು ಪ್ರಾಸಾ-1 ರಿಂದ 3 ಎಂದು ವಿಚಾರಣೆಗೆ ಒಳಪಡಿಸಿ, ನಾಲ್ಕು ದಾಖಲೆಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ-1 ರಿಂದ 4, ಎಂದು ಗುರುತಿಸಿದ್ದು, ಸಹಾಯಕ ಸರ್ಕಾರಿ ಅಭಿಯೋಜಕರು ಇತರೆ ಸಾಕ್ಷಿಗಳಿಗೆ ಆದೇಶಿಕೆಯನ್ನು ಜಾರಿ ಮಾಡಲು ಕೋರಿದ್ದು, ಅಭಿಯೋಜನೆಯ ಪರವಾದ ಸಾಕ್ಷಿದಾರರು

ಅಭಿಯೋಜನಾ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಮತ್ತು ಇದರಿಂದ ಅಭಿಯೋಜನೆಗೆ ಅನುಕೂಲವಾಗದ ಕಾರಣ ಮತ್ತು ಅಭಿಯೋಜನೆಯ ಸಾಕ್ಷ್ಯ ನೀಡುವಿಕೆಯ ಮುಕ್ತಾಯದ ನಂತರ ಆರೋಪಿತರಿಗೆ ವ್ಯತಿರಿಕ್ತವಾದ ಸಾಕ್ಷಿಗಳಿಲ್ಲದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ವಿಚಾರಣೆಯನ್ನು ಮನ್ನಾ ಮಾಡಲಾಯಿತು.

6. ಪ್ರಕರಣದ ವಿಚಾರಣೆಯ ತರುವಾಯ ಉಭಯ ಪಕ್ಷಗಾರರ ವಾದವನ್ನು ಆಲಿಸಿ ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ನ್ಯಾಯಾಲಯದ ನಿರ್ಣಯಕ್ಕೆ ಕೆಳಕಂಡ ಅಂಶಗಳು ಉದ್ಭವಿಸುತ್ತವೆ...

> **ಅಂಶ - 1** : ದಿನಾಂಕ 19.05.2020 ರಂದು ರಾತ್ರಿ 8.30 ಗಂಟೆ ಸಮಯದಲ್ಲಿ ಗೌರಿಬಿದನೂರು ಗ್ರಾಮಂತರ ಪೊಲೀಸ್ ಠಾಣೆ ಸರಹದ್ದಿಗೆ ಸೇರಿದ ಗೌರಿಬಿದನೂರು ತಾಲ್ಲೂಕು, ಬಾದಿಮರಳೂರು ಗ್ರಾಮದ ಜಾಲಪ್ಪ ಬಿನ್ ಆದೆಪ್ಪ ರವರ ಜಮೀನು ಬಳಿ ಚಾಸಾ.1 ಹನುಮಂತಪ್ಪ ರವರು ಅವರ ಜಮೀನಿನಲ್ಲಿ ಟ್ರ್ಯಾಕ್ಟರ್ ನಿಂದ ಉಳುಮೆ ಮಾಡಿಸುತ್ತಿದ್ದಾಗ, ಟ್ರ್ಯಾಕ್ಟರ್ ಸ್ವಲ್ಪ 1ನೇ ಆರೋಪಿಯ ಜಮೀನಿನಲ್ಲಿ ಹೋಗಿದ್ದರಿಂದ 1ನೇ ಆರೋಪಿಯು ಚಾಸಾ.1 ರವರಿಗೆ ನಮ್ಮ ಜಮೀನಿನ ಮುಸುಕಿನ ಜೋಳದ ಬೆಳೆಯನ್ನು ನಾಶಪಡಿಸಿದ್ದೀಯಾ ಎಂದು ಏಕಾಏಕಿ ಜಗಳ ತೆಗೆದಿದ್ದು, ನಂತರ ಅಲ್ಲಿಗೆ ಬಂದ 2ನೇ ಆರೋಪಿಯು ಕೈಗಳಿಂದ ಚಾಸಾ.1 ರವರ ಮೈ ಕೈಗೆ ಹೊಡೆದು ಎದೆಗೆ ಕಚ್ಚಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿ, ನಂತರ 3ನೇ ಆರೋಪಿಯು ಚಾಸಾ.2 ರವರಿಗೆ ಕೈಗಳಿಂದ ಹೊಡೆದು ಜುಟ್ಟನ್ನು ಹಿಡಿದು ಎಳೆದಾಡಿದ್ದು, ಜಗಳ ಬಿಡಿಸಲು ಅಡ್ಡ ಹೋದ ಚಾಸಾ.3 ರವರಿಗೆ ಆರೋಪಿಗಳಾದ ನೀವುಗಳು ಕೈಗಳಿಂದ ಮೈ ಮೇಲೆ ಹೊಡೆದು ಕೆಳಕ್ಕೆ ತಳ್ಳಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಪ್ರಕಾರ ಆರೋಪಿತರು ಭಾರತ ದಂಡ ಸಂಹಿತೆ ಕಲಂ 323 ಸಹ ಕಲಂ 34 ರಡಿಯಲ್ಲಿ

ದಂಡಸಲ್ಪಡಬಹುದಾದ ಅಪರಾಧಗಳನ್ನು ಎಸಗಿರುತ್ತಾರೆಂಬುದನ್ನು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತುಪಡಿಸಿದೆಯೇ?

**ಅಂಶ - 2 :** ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತರೆಲ್ಲರೂ ಅಪರಾದ ಮಾಡುವ ಸಮಾನ ಉದ್ದೇಶದಿಂದ ಬಂದು ಚಾಸಾ.1 ರವರ ಜೊತೆ ಜಗಳ ತೆಗೆದಿದ್ದು, ಆ ಪೈಕಿ 1ನೇ ಆರೋಪಿಯು ಚಾಸಾ.1 ರವರಿಗೆ ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಪ್ರಕಾರ ಆರೋಪಿತರು ಭಾರತ ದಂಡ ಸಂಹಿತೆ ಕಲಂ 324 ಸಹ ಕಲಂ 34 ರಡಿಯಲ್ಲಿ ದಂಡಸಲ್ಪಡಬಹುದಾದ ಅಪರಾಧಗಳನ್ನು ಎಸಗಿರುತ್ತಾರೆಂಬುದನ್ನು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತುಪಡಿಸಿದೆಯೇ?

**ಅಂಶ - 3 :** ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿತರೆಲ್ಲರೂ ಅಪರಾದ ಎಸಗುವ ಸಮಾನ ಉದ್ದೇಶದಿಂದ ಬಂದು ಚಾಸಾ.1 ರವರ ಜೊತೆ ಜಗಳ ತೆಗೆದಿದ್ದು, ಆ ಪೈಕಿ 1ನೇ ಆರೋಪಿಯು ಚಾಸಾ.1 ರವರಿಗೆ ಬೋಳಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿಗೆ ಭಂಗವನ್ನುಂಟು ಮಾಡಿದ್ದು, ಆ ಪ್ರಕಾರ ಆರೋಪಿತರು ಭಾರತ ದಂಡ ಸಂಹಿತೆ ಕಲಂ 504 ಸಹ ಕಲಂ 34 ರಡಿಯಲ್ಲಿ ದಂಡಸಲ್ಪಡಬಹುದಾದ ಅಪರಾಧಗಳನ್ನು ಎಸಗಿರುತ್ತಾರೆಂಬುದನ್ನು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆಯಿಲ್ಲದಂತೆ ರುಜುವಾತುಪಡಿಸಿದೆಯೇ?

**ಅಂಶ - 4 :** ಆದೇಶ ಏನು?

7. ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನಂತೆ ಇದೆ:

| | | |
|---|---|---|
| **ಅಂಶ - 1** | **:** | **ನಕಾರಾತ್ಮಕವಾಗಿ** |
| **ಅಂಶ - 2** | **:** | **ನಕಾರಾತ್ಮಕವಾಗಿ** |
| **ಅಂಶ - 3** | **:** | **ನಕಾರಾತ್ಮಕವಾಗಿ** |
| **ಅಂಶ - 4** | **:** | **ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ** |

**:: ಕಾರಣಗಳು ::**

8. **ಅಂಶ-1 ರಿಂದ 3 :** ಈ ಮೇಲಿನ ಎಲ್ಲಾ ಅಂಶಗಳು ಒಂದಕ್ಕೊಂದು ಸಂಬಂಧಿಸಿರುವುದರಿಂದ ವಿಷಯಗಳ ಪುನರಾವರ್ತನೆಯನ್ನು ತಡೆಯಲು ಅವುಗಳನ್ನು ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ಚಾಸಾ.1 ರವರು ಅವರ ಜಮೀನಿನಲ್ಲಿ ಟ್ರ್ಯಾಕ್ಟರ್ ನಿಂದ ಉಳುಮೆ ಮಾಡಿಸುತ್ತಿದ್ದಾಗ ಟ್ರ್ಯಾಕ್ಟರ್ ಸ್ವಲ್ಪ 1ನೇ ಆರೋಪಿಯ ಜಮೀನಿನಲ್ಲಿ ಹೋಗಿದ್ದರಿಂದ 1ನೇ ಆರೋಪಿಯು ಚಾಸಾ.1 ರವರಿಗೆ ನಮ್ಮ ಜಮೀನಿನ ಮುಸುಕಿನ ಜೋಳದ ಬೆಳೆಯನ್ನು ನಾಶಪಡಿಸಿದ್ದೀಯಾ ಎಂದು ಏಕಾಏಕಿ ಜಗಳ ಮಾಡಿ ಬೋಳಿ ಮಗನೇ ಎಂದು ಚಾಸಾ.1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು, ನಂತರ 1 ರಿಂದ 3ನೇ ಆರೋಪಿಗಳು ಚಾಸಾ.1 ರವರಿಗೆ ಜಗಳ ಮಾಡಿದ್ದು, ಆ ಪೈಕಿ 1ನೇ ಆರೋಪಿಯು ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, 2ನೇ ಆರೋಪಿಯು ಕೈಗಳಿಂದ ಚಾಸಾ.1 ರವರ ಮೈ ಕೈಗೆ ಹೊಡೆದು ಎದೆಗೆ ಕಚ್ಚಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, 3ನೇ ಆರೋಪಿಯು ಅಲ್ಲಿಯೇ ಇದ್ದ ಚಾಸಾ.2 ರವರಿಗೆ ಕೈಗಳಿಂದ ಹೊಡೆದು ಜುಟ್ಟನ್ನು ಹಿಡಿದು ಎಳೆದಾಡುತ್ತಿದ್ದಾಗ, ಜಗಳ ಬಿಡಿಸಲು ಅಡ್ಡ ಹೋದ ಚಾಸಾ.3 ರವರಿಗೆ 1 ರಿಂದ 3ನೇ ಆರೋಪಿಗಳು ಕೈಗಳಿಂದ ಮೈ ಮೇಲೆ ಹೊಡೆದು ಕೆಳಕ್ಕೆ ತಳ್ಳಿ ಸಾಮಾನ್ಯ

ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತಾರೆಂದು ಅಭಿಯೋಜನಾ ಪ್ರಕರಣವಾಗಿರುತ್ತದೆ. ಸದರಿ ಆರೋಪವನ್ನು ಸಾಬೀತುಪಡಿಸುವ ಭಾರವು ಸಂಪೂರ್ಣವಾಗಿ ಅಭಿಯೋಜನೆಯ ಮೇಲೆ ಇರುತ್ತದೆ.

10. ಅಭಿಯೋಜನೆಯು ಆರೋಪಿತರ ಮೇಲಿನ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಪ್ರಾಸಾ-1 ರಿಂದ 3ರವರನ್ನು ದೂರುದಾರ ಹಾಗೂ ಗಾಯಾಳು ಸಾಕ್ಷಿಗಳನ್ನು ಹಾಗೂ ನಿಪಿ.1 ರಿಂದ 4 ದಾಖಲೆಗಳನ್ನು ವಿಚಾರಣೆಗೆ ಒಳಪಟ್ಟಿರುತ್ತದೆ.

11. ಪ್ರಾಸಾ-1 ರವರು ದೂರುದಾರರಾಗಿದ್ದು, ವಿಚಾರಣೆಗೊಳಪಡಿಸಿದಾಗ ಇವರು ತಮ್ಮ ವಿಚಾರಣೆಯಲ್ಲಿ ಚಾಸಾ.2 ತನ್ನ ಹೆಂಡತಿ, ಚಾಸಾ.3 ತನ್ನ ಮಗ, ನಿಪಿ.1 ರಲ್ಲಿ ಬರೆದಿರುವ ಅಂಶಗಳು ತನಗೆ ಗೊತ್ತಿಲ್ಲ. ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಸುದೀರ್ಘ ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ತಮ್ಮ ನಿಲುವಿಗೆ ಪೂರಕವಾದ ಉತ್ತರವನ್ನು ಪಡೆದಿರುವುದಿಲ್ಲ. ಸದರಿ ಸಾಕ್ಷ್ಯವನ್ನು ಗಮನಿಸಿದಾಗ ಪ್ರಾಸಾ-1 ರವರು ಅಭಿಯೋಜನೆಗೆ ಸಹಕಾರಿಯಾಗುವಂತೆ ಯಾವುದೇ ರೀತಿಯಾದ ಸಾಕ್ಷ್ಯವನ್ನು ನೀಡಿರುವುದಿಲ್ಲ ಹಾಗೂ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನೀಡಿರುತ್ತಾರೆ.

12. ಪ್ರಾಸಾ-2 ರವರು ಗಾಯಾಳು ಸಾಕ್ಷಿಯಾಗಿದ್ದು, ವಿಚಾರಣೆಗೊಳಪಡಿಸಿದಾಗ ಇವರು ತಮ್ಮ ವಿಚಾರಣೆಯಲ್ಲಿ ಚಾಸಾ.1 ತನ್ನ ಗಂಡ, ಚಾಸಾ.3 ತನ್ನ ಮಗ, ಈ ಪ್ರಕರಣದ ಬಗ್ಗೆ ಗೊತ್ತಿಲ್ಲ. ತಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಸುದೀರ್ಘ ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ತಮ್ಮ ನಿಲುವಿಗೆ ಪೂರಕವಾದ ಉತ್ತರವನ್ನು ಪಡೆದಿರುವುದಿಲ್ಲ. ಸದರಿ

ಸಾಕ್ಷ್ಯವನ್ನು ಗಮನಿಸಿದಾಗ ಪ್ರಾಸಾ-2 ರವರು ಅಭಿಯೋಜನೆಗೆ ಸಹಕಾರಿಯಾಗುವಂತೆ ಯಾವುದೇ ರೀತಿಯಾದ ಸಾಕ್ಷ್ಯವನ್ನು ನೀಡಿರುವುದಿಲ್ಲ ಹಾಗೂ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನೀಡಿರುತ್ತಾರೆ.

13. ಪ್ರಾಸಾ-3 ರವರು ಗಾಯಾಳು ಸಾಕ್ಷಿಯಾಗಿದ್ದು, ವಿಚಾರಣೆಗೊಳಪಡಿಸಿದಾಗ ಇವರು ತಮ್ಮ ವಿಚಾರಣೆಯಲ್ಲಿ ಚಾಸಾ.1 ತನ್ನ ತಂದೆ, ಚಾಸಾ.2 ತನ್ನ ತಾಯಿ, ಈ ಪ್ರಕರಣದ ಬಗ್ಗೆ ಗೊತ್ತಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲವೆಂದು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಅಭಿಯೋಜನೆಯು ಸುದೀರ್ಘ ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ತಮ್ಮ ನಿಲುವಿಗೆ ಪೂರಕವಾದ ಉತ್ತರವನ್ನು ಪಡೆದಿರುವುದಿಲ್ಲ. ಸದರಿ ಸಾಕ್ಷ್ಯವನ್ನು ಗಮನಿಸಿದಾಗ ಪ್ರಾಸಾ-3 ರವರು ಅಭಿಯೋಜನೆಗೆ ಸಹಕಾರಿಯಾಗುವಂತೆ ಯಾವುದೇ ರೀತಿಯಾದ ಸಾಕ್ಷ್ಯವನ್ನು ನೀಡಿರುವುದಿಲ್ಲ ಹಾಗೂ ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನೀಡಿರುತ್ತಾರೆ.

14. ಈ ಪ್ರಕರಣದಲ್ಲಿ ಪ್ರಾಸಾ-1 ರಿಂದ 3 ರವರು ಪ್ರಮುಖ ಸಾಕ್ಷಿದಾರರಾಗಿದ್ದು, ಅಭಿಯೋಜನೆ ಪಕ್ಷದವರು ಆರೋಪಿತರ ಮೇಲೆ ಮಾಡಿದ ಆಪಾದನೆಯನ್ನು ರುಜುವಾತುಪಡಿಸಲು ಅತೀ ಮುಖ್ಯ ಸಾಕ್ಷಿದಾರರಾಗಿರುತ್ತಾರೆ. ಆದರೆ ಪ್ರಾಸಾ-1 ರಿಂದ 3ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿರುವುದು ಕಂಡು ಬರುತ್ತದೆ. ಪ್ರಾಸಾ-1 ರಿಂದ 3ರವರ ಸಾಕ್ಷ್ಯವನ್ನು ಗಂಭೀರವಾಗಿ ಗಮನಿಸಿದಾಗ, ಪ್ರಾಸಾ-1 ರಿಂದ 3ರವರ ಸಾಕ್ಷಿಯ ಅನುಪಸ್ಥಿತಿಯಲ್ಲಿ ಉಳಿದ ಸಾಕ್ಷಿದಾರರ ವಿಚಾರಣೆ ಮಾಡಿದರು ಸಹ ಅದು ಆರೋಪಿತರ ವಿರುದ್ಧ ಆರೋಪಿಸಲಾದ ಆರೋಪಗಳನ್ನು ಅಭಿಯೋಜನೆಯು ಸಾಬೀತುಪಡಿಸುವಲ್ಲಿ

ಸಫಲರಾಗುವುದಿಲ್ಲವಾದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡಬೇಕೆಂಬ ಮನವಿಯನ್ನು ನ್ಯಾಯಾಲಯವು ತಿರಸ್ಕರಿಸಿರುತ್ತದೆ.

15. ಪ್ರಾಸಾ-1 ರಿಂದ 3ರವರ ಸಾಕ್ಷ್ಯಾವನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ ಅವರು ನೀಡಿದ ಸಾಕ್ಷ್ಯದಂತೆ ಹಾಗೂ ನ್ಯಾಯಾಲಯದ ಮುಂದೆ ಹಾಜರುಪಡಿಸಿದ ದಾಖಲಾತಿ ಸಾಕ್ಷ್ಯಕ್ಕೆ ಅನುಗುಣವಾಗಿ ಪ್ರಾಸಾ-1 ರಿಂದ 3ರವರು ಈ ಪ್ರಕರಣದ ಪ್ರಮುಖ ಸಾಕ್ಷಿದಾರರಾಗಿದ್ದು, ಅಭಿಯೋಜನೆಗೆ ಸಹಾಯವಾಗುವಂತಹ ಸಾಕ್ಷ್ಯ ನುಡಿದಿರುವುದಿಲ್ಲ. ಬದಲಾಗಿ ಅಭಿಯೋಜನೆ ಪ್ರಕರಣಕ್ಕೆ ವಿಭಿನ್ನವಾಗಿ ಸಾಕ್ಷಿ ನುಡಿದಿರುತ್ತಾರೆ. ಆದಕಾರಣ ಆರೋಪಿತರ ವಿರುದ್ಧ ಮಾಡಲಾದ ಆರೋಪವು ರುಜುವಾತಾಗುವುದಿಲ್ಲ. ಆದ್ದರಿಂದ ಪ್ರಾಸಾ- 1 ರಿಂದ 3 ರವರು ಅಭಿಯೋಜನೆ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯವನ್ನು ನೀಡಿರುತ್ತಾರೆ ಹಾಗೂ ಅವರ ಸಾಕ್ಷ್ಯವು ಅಭಿಯೋಜನಾ ಪ್ರಕರಣಕ್ಕೆ ಯಾವುದೇ ರೀತಿಯಾಗಿ ಅನುಕೂಲಕರವಾಗಿರುವುದಿಲ್ಲ ಎಂದು ನ್ಯಾಯಾಲಯವು ಅಭಿಪ್ರಾಯಪಡುತ್ತದೆ.

16. ನಿ.ಪಿ-1 ದೂರು, ನಿ.ಪಿ-1(ಎ) ಸಾಕ್ಷಿಯ ಸಹಿ, ನಿ.ಪಿ-2 ರಿಂದ 4 ನಿರಾಕರಿಸಿದ ಹೇಳಿಕೆಗಳಾಗಿದ್ದು, ಸದರಿ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಈ ಪ್ರಕರಣದಲ್ಲಿ ಪ್ರಮುಖ ಸಾಕ್ಷಿದಾರರಾದ ಪ್ರಾಸಾ-1 ರಿಂದ 3ರವರು ದೂರುದಾರರು ಮತ್ತು ಗಾಯಾಳು ಸಾಕ್ಷಿದಾರರಾಗಿದ್ದು, ಸ್ವತಃ ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಲ್ಲದೆ ಪ್ರಾಸಾ-1 ರಿಂದ 3ರವರು ಆರೋಪಿಗಳೇ ಕೃತ್ಯ ಎಸಗಿದ್ದಾರೆಂದು ಎಂಬುವುದನ್ನು ಸ್ಪಷ್ಟವಾಗಿ ಎಲ್ಲಿಯೂ ತಮ್ಮ ಸಾಕ್ಷ್ಯದಲ್ಲಿ ಹೇಳಿರುವುದಿಲ್ಲ. ಹಾಗಾಗಿ ಅವರು ಸದರಿ ಪ್ರಕರಣದ ಫಿರ್ಯಾದಿ ಮತ್ತು ಗಾಯಾಳು ಸಾಕ್ಷಿಯಾಗಿದ್ದು, ಅವರ ಸಾಕ್ಷ್ಯದ ಮೇಲೆಯೇ ಅಭಿಯೋಜನಾ ಪ್ರಕರಣದ ಉಳಿವು ನಿಂತಿರುತ್ತದೆ. ಸದರಿ ಅಂಶಗಳನ್ನು ಗಣನೆಗೆ ತೆಗೆದುಕೊಂಡಾಗ ಫಿರ್ಯಾದಿ ಮತ್ತು ಗಾಯಾಳು ಸಾಕ್ಷಿಯು ಅಭಿಯೋಜನಾ

ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯವನ್ನು ನೀಡಿರುವುದರಿಂದ ಅಭಿಯೋಜನೆಗೆ ತನ್ನ ಪ್ರಕರಣವನ್ನು ಸಾಬೀತುಪಡಿಸಲು ಸಂಪೂರ್ಣವಾಗಿ ಹಿನ್ನಡೆಯಾಗಿರುತ್ತದೆಂದು ಸ್ಪಷ್ಟವಾಗಿ ಹೇಳಬಹುದು. ಸದರಿ ಸಾಕ್ಷಿಯನ್ನು ಸುಧೀರ್ಘವಾಗಿ ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅಭಿಯೋಜನಾ ಪ್ರಕರಣಕ್ಕೆ ಸಹಾಯಕಾರಿಯಾಗುವಂತಹ ಯಾವುದೇ ಹೇಳಿಕೆಗಳನ್ನು ಅಭಿಯೋಜನೆಯು ಪಡೆದುಕೊಂಡಿರುವುದಿಲ್ಲ. ಹಾಗಾಗಿ ಸದರಿ ಅಂಶಗಳು ಅಭಿಯೋಜನಾ ಪ್ರಕರಣದ ನೈಜತೆಯ ಕುರಿತು ಸಂದೇಹವನ್ನುಂಟು ಮಾಡುತ್ತದೆ.

17. ವಿಷಯದ ಆ ದೃಷ್ಟಿಕೋನದಿಂದ ಈ ಪ್ರಕರಣದಲ್ಲಿ ಲಭ್ಯವಿರುವ ಎಲ್ಲಾ ಸಾಕ್ಷಿದಾರರ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಸದರಿ ಕೃತ್ಯವನ್ನು ಆರೋಪಿತರೇ ಮಾಡಿರುತ್ತಾರೆಂದು ಸಾಕ್ಷಿದಾರನು ತನ್ನ ಸಾಕ್ಷ್ಯದಲ್ಲಿ ಸ್ಪಷ್ಟವಾಗಿ ನುಡಿದಿರುವುದಿಲ್ಲ. ಅಲ್ಲದೇ ಚಾಸಾ.1ರವರು ಅವರ ಜಮೀನಿನಲ್ಲಿ ಟ್ರ್ಯಾಕ್ಟರ್ ನಿಂದ ಉಳುಮೆ ಮಾಡಿಸುತ್ತಿದ್ದಾಗ ಟ್ರ್ಯಾಕ್ಟರ್ ಸ್ವಲ್ಪ 1ನೇ ಆರೋಪಿಯ ಜಮೀನಿನಲ್ಲಿ ಹೋಗಿದ್ದರಿಂದ 1ನೇ ಆರೋಪಿಯು ಚಾಸಾ.1 ರವರಿಗೆ ನಮ್ಮ ಜಮೀನಿನ ಮುಸುಕಿನ ಜೋಳದ ಬೆಳೆಯನ್ನು ನಾಶಪಡಿಸಿದ್ದೀಯಾ ಎಂದು ಏಕಾಏಕಿ ಜಗಳ ಮಾಡಿ ಬೋಳಿ ಮಗನೇ ಎಂದು ಚಾಸಾ.1 ರವರನ್ನು ಅವಾಚ್ಯ ಶಬ್ದಗಳಿಂದ ಬೈದು, ನಂತರ 1 ರಿಂದ 3ನೇ ಆರೋಪಿಗಳು ಚಾಸಾ.1 ರವರಿಗೆ ಜಗಳ ಮಾಡಿದ್ದು, ಆ ಪೈಕಿ 1ನೇ ಆರೋಪಿಯು ದೊಣ್ಣೆಯಿಂದ ಚಾಸಾ.1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, 2ನೇ ಆರೋಪಿಯು ಕೈಗಳಿಂದ ಚಾಸಾ.1 ರವರ ಮೈ ಕೈಗೆ ಹೊಡೆದು ಎದೆಗೆ ಕಚ್ಚಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, 3ನೇ ಆರೋಪಿಯು ಅಲ್ಲಿಯೇ ಇದ್ದ ಚಾಸಾ.2 ರವರಿಗೆ ಕೈಗಳಿಂದ ಹೊಡೆದು ಜುಟ್ಟನ್ನು ಹಿಡಿದು ಎಳೆದಾಡುತ್ತಿದ್ದಾಗ, ಜಗಳ ಬಿಡಿಸಲು ಅಡ್ಡ ಹೋದ ಚಾಸಾ.3 ರವರಿಗೆ 1 ರಿಂದ 3ನೇ

ಆರೋಪಿಗಳು ಕೈಗಳಿಂದ ಮೈ ಮೇಲೆ ಹೊಡೆದು ಕೆಳಕ್ಕೆ ತಳ್ಳಿ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತಾರೆಂದು ಅಭಿಯೋಜನಾ ಸಾಕ್ಷಿಯು ಎಲ್ಲಿಯೂ ತನ್ನ ಸಾಕ್ಷ್ಯದಲ್ಲಿ ಹೇಳಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು, ಅದನ್ನು ಮುದ್ದೆ ಮಾಲು-1 ಎಂದು ಗುರುತಿಸಲಾಯಿತು. ಇಂತಹ ಪ್ರಕರಣಗಳಲ್ಲಿ ಆರೋಪಿತರೇ ಕೃತ್ಯ ಎಸಗಿರುತ್ತಾರೆಂದು ಸಾಭೀತುಪಡಿಸುವುದು ಅಭಿಯೋಜನೆಯ ಪ್ರಮುಖವಾದ ಕರ್ತವ್ಯವಾಗಿರುತ್ತದೆ. ಆದರೆ ಸದರಿ ಆರೋಪಿತರ ತಪ್ಪನ್ನು ಅಭಿಯೋಜನೆಯು ಸಾಭೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿದೆ ಎಂದು ನ್ಯಾಯಾಲಯವು ತೀರ್ಮಾನಕ್ಕೆ ಬಂದಿರುತ್ತದೆ. ಹಾಗಾಗಿ ಆರೋಪಿತರೇ ಸದರಿ ಆರೋಪಗಳನ್ನು ಎಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂದೇಹವಾಗಿ ಸಾಭೀತುಪಡಿಸಲು ವಿಫಲವಾಗಿದೆ ಎಂದು ಸ್ಪಷ್ಟವಾಗಿ ಕಂಡುಬರುತ್ತದೆ.

18. ಅಪರಾಧಿಕ ನ್ಯಾಯಾ ಶಾಸ್ತ್ರದ ಪ್ರಕಾರ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಎರಡು ದೃಷ್ಟಿ ಕೋನಗಳು ಉದ್ಭವಿಸಿದಲ್ಲಿ ಆರೋಪಿತರ ಪರ ಇರುವ ದೃಷ್ಟಿಕೋನವನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂಬುವುದು ಸ್ಥಾಪಿತವಾದ ಕಾನೂನಾಗಿದೆ. ಹಾಗಾಗಿ ಸದರಿ ಪ್ರಕರಣದಲ್ಲಿ ಆರೋಪಿತರು ದೋಷಾರೋಪಣಾ ಪಟ್ಟಿಯಲ್ಲಿ ವಿವರಿಸಿದಂತಹ ಆರೋಪವನ್ನು ಎಸಗಿರುತ್ತಾನೆಂಬುವುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಆದ ಕಾರಣ, ನ್ಯಾಯಾಲಯವು ಆರೋಪಿತರ ಪರವಿರುವ ದೃಷ್ಟಿಕೋನವನ್ನು ತೆಗೆದುಕೊಂಡು ಅವರಿಗೆ ಸಂಶಯದ ಲಾಭವನ್ನು ನೀಡಿರುತ್ತದೆ. ಮೇಲೆ ಚರ್ಚಿಸಲಾದ ಕಾರಣಗಳಿಗಾಗಿ **ಅಂಶ-1 ರಿಂದ 3** ಗಳನ್ನು **ನಕಾರಾತ್ಮಕವಾಗಿ** ಉತ್ತರಿಸಿದೆ.

19. **<u>ಅಂಶ-4 :</u>** ಅಂಶ 1 ರಿಂದ 3 ರಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಆರೋಪಿತರು ಅಪರಾಧ ಎಸಗಿರುವ ಬಗ್ಗೆ ಸಂಶಯ ಉಂಟಾಗುತ್ತದೆ. ಆದ ಕಾರಣ ಸಂಶಯದ ಲಾಭವನ್ನು ಆರೋಪಿತರಿಗೆ ನೀಡತಕ್ಕದೆಂದು ಈ ನ್ಯಾಯಾಲಯವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**<u>ಆದೇಶ</u>**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ದತ್ತವಾದ ಅಧಿಕಾರದಿಂದ ಆರೋಪಿತನ ವಿರುದ್ಧ ಮಾಡಲಾದ ಭಾರತ ದಂಡ ಸಂಹಿತೆ ಕಲಂ 323, 324 ಮತ್ತು 504 ಸಹ ಕಲಂ 34 ರಡಿಯಲ್ಲಿನ ದಂಡನೀಯ ಅಪರಾಧಗಳ ಆರೋಪದಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆಗೆ ಆದೇಶಿಸಲಾಗಿದೆ.

ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರವು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಪ್ರಕಾರ ಆರು ತಿಂಗಳವರೆಗೆ ಚಾಲ್ತಿಯಲ್ಲಿರತಕ್ಕದ್ದು.

ಮುದ್ದೆ ಮಾಲು.1 ಒಂದು ದೊಣ್ಣೆಯಾಗಿದ್ದು, ಇದನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ಕೊಟ್ಟು ಬೆರಳಚ್ಚು ಮಾಡಿದ ನಂತರ ನಾನು ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ನಂತರ ಈ ದಿನ ಅಂದರೆ ದಿನಾಂಕ 02.06.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿರುತ್ತೇನೆ )

ಸಹಿ/-
(ಪುಷ್ಪ ಡಿ.)
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಗೌರಿಬಿದನೂರು

**:: ಅನುಬಂಧ ::**

**1) ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ :**

ಪ್ರಾಸಾ-1 : ಹನುಮಂತಪ್ಪ

ಪ್ರಾಸಾ-2 : ರಾಮಾಂಜಿನಮ್ಮ

ಪ್ರಾಸಾ-3 : ವಿನಯ ಕುಮಾರ್

**2) ಅಭಿಯೋಜನೆ ಪರ ಗುರ್ತಿಸಿದ ದಾಖಲಾತಿಗಳು :**

ನಿಪಿ-1 : ದೂರು

ನಿಪಿ-1(ಎ) : ಸಾಕ್ಷಿಯ ಸಹಿ

ನಿಪಿ-2 ರಿಂದ 4 : ನಿರಾಕರಿಸಿದ ಹೇಳಿಕೆಗಳು

**3) ಆರೋಪಿತರ ಪರ ಯಾವುದೇ ಸಾಕ್ಷಿ ಮತ್ತು ದಾಖಲೆಗಳು:** ಇರುವುದಿಲ್ಲ

**4) ಮುದ್ದೆ ಮಾಲುಗಳು :**

ಮುದ್ದೆ ಮಾಲು-1 : ದೊಣ್ಣೆ

ಸಹಿ/-
(ಪುಷ್ಪ ಡಿ.)
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಗೌರಿಬಿದನೂರು.